**ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ, ದಾವಣಗೆರೆ.**

# –: ಸಭಾ ನಡಾವಳಿ :–

## ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ 2021–22ರ ಜಿಲ್ಲಾ ಅನುಷ್ಟಾನ ಮೇಲ್ವಿಚಾರಣಾ ಸಮಿತಿ ಸಭೆ

2021–22ನೇ ಸಾಲಿನ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಜಿಲ್ಲಾ ಅನುಷ್ಟಾನ ಮೇಲ್ವಿಚಾರಣಾ ಸಮಿತಿ ಸಭೆಯನ್ನು ದಿನಾಂಕ:29/03/2022 ರಂದು ಜಿಲ್ಲಾಡಳಿತ ಭವನ, ದಾವಣಗೆರೆ ಇಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಉಪಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ದಾವಣಗೆರೆ ಜಿಲ್ಲೆ ಇವರು ಸಭೆಯಲ್ಲಿದ್ದ ಎಲ್ಲರನ್ನೂ ಸ್ವಾಗತಿಸಿದರು ಈ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯಲ್ಲಿ ಹಾಜರಿದ್ದವರು :–

1. ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಭವನ, ದಾವಣಗೆರೆ ಜಿಲ್ಲೆ, ದಾವಣಗೆರೆ ಹಾಗೂ ಅಧ್ಯಕ್ಷರು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಜಿಲ್ಲಾ ಅನುಷ್ಟಾನ ಮೇಲ್ವಿಚಾರಣಾ ಸಮಿತಿ.
2. ಉಪನಿರ್ದೇಶಕರು(ಆಡಳಿತ) ಸಾ.ಶಿ.ಇ ದಾವಣಗೆರೆ ಜಿಲ್ಲೆ ಹಾಗೂ ಕಾರ್ಯದರ್ಶಿ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಜಿಲ್ಲಾ ಅನುಷ್ಟಾನ ಮೇಲ್ವಿಚಾರಣಾ ಸಮಿತಿ.
3. ಉಪಯೋಜನಾ ಸಮನ್ವಯ ಅಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ(ಎಸ್.ಎಸ್.ಕೆ) ಹಾಗೂ ಸದಸ್ಯರು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಜಿಲ್ಲಾ ಅನುಷ್ಟಾನ ಮೇಲ್ವಿಚಾರಣಾ ಸಮಿತಿ.
4. ಜಿಲ್ಲಾ ಅರಣ್ಯಾಧಿಕಾರಿ, ದಾವಣಗೆರೆ, ಸದಸ್ಯರು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಜಿಲ್ಲಾ ಅನುಷ್ಟಾನ ಮೇಲ್ವಿಚಾರಣಾ ಸಮಿತಿ.
5. ಜಿಲ್ಲಾ ಆರೋಗ್ಯ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ದಾವಣಗೆರೆ, ಸದಸ್ಯರು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಜಿಲ್ಲಾ ಅನುಷ್ಟಾನ ಮೇಲ್ವಿಚಾರಣಾ ಸಮಿತಿ.
6. ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ದಾವಣಗೆರೆ ಸದಸ್ಯರು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಜಿಲ್ಲಾ ಅನುಷ್ಟಾನ ಮೇಲ್ವಿಚಾರಣಾ ಸಮಿತಿ.
7. **D.O** ರವರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ದಾವಣಗೆರೆ ಜಿಲ್ಲೆ, ಸದಸ್ಯರು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಜಿಲ್ಲಾ ಅನುಷ್ಟಾನ ಮೇಲ್ವಿಚಾರಣಾ ಸಮಿತಿ.
8. ಸಹಾಯಕ ಯೋಜನಾ ಸಮನ್ವಯಾಧಿಕಾರಿಗಳು, ಎಸ್.ಎಸ್.ಕೆ ಹಾಗೂ ಜಿಲ್ಲಾ ನೋಡಲ್ ಅಧಿಕಾರಿಗಳು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಜಿಲ್ಲಾ ಅನುಷ್ಟಾನ ಮೇಲ್ವಿಚಾರಣಾ ಸಮಿತಿ.
9. ಮುಖ್ಯೋಪಾದ್ಯಾಯರು, ಸರ್ಕಾರಿ ಪ್ರೌಢ ಶಾಲೆ ಹಳೇಬಾತಿ ಗುಡ್ಡದ ಕ್ಯಾಂಪ್, ದಾವಣಗೆರೆ ಉತ್ತರ ವಲಯ.
10. ಮುಖ್ಯೋಪಾದ್ಯಾಯರು, ಸರ್ಕಾರಿ ಪ್ರೌಢ ಶಾಲೆ ತುರ್ಚಘಟ್ಟ, ದಾವಣಗೆರೆ ದಕ್ಷಿಣ ವಲಯ.
11. ಮುಖ್ಯೋಪಾದ್ಯಾಯರು, ಸರ್ಕಾರಿ ಉರ್ದು ಪ್ರೌಢ ಶಾಲೆ ಮಲೇಬೆನ್ನೂರು, ಹರಿಹರ ತಾಲ್ಲೂಕು.
12. ಮುಖ್ಯೋಪಾದ್ಯಾಯರು, ಸರ್ಕಾರಿ ಪ್ರೌಢ ಶಾಲೆ ಕತ್ತಿಗೆ, ಹೊನ್ನಾಳಿ ತಾಲ್ಲೂಕು.
13. ಮುಖ್ಯೋಪಾದ್ಯಾಯರು, ಸರ್ಕಾರಿ ಪ್ರೌಢ ಶಾಲೆ ಮೆದಿಕೇರನಹಳ್ಳಿ, ಜಗಳೂರು ತಾಲ್ಲೂಕು.
14. ಮುಖ್ಯೋಪಾದ್ಯಾಯರು, ಗ್ರಾಮಾಂತರ ಪ್ರೌಢ ಶಾಲೆ ಕೆರೆಬಿಳಚಿ ಚನ್ನಗಿರಿ ತಾಲ್ಲೂಕು.

15. ಮುಖ್ಯೋಪಾದ್ಯಾಯರು, ಸರ್ಕಾರಿ ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ)ವಿಭಾಗ ತಾವರಕೆರೆ ಚನ್ನಗಿರಿ ತಾಲ್ಲೂಕು.
16. ಮುಖ್ಯೋಪಾದ್ಯಾಯರು, ಸರ್ಕಾರಿ ಪ್ರೌಢ ಶಾಲೆ ಮೆಳ್ಳೆಕಟ್ಟೆ ದಾವಣಗೆರೆ ಉತ್ತರ ವಲಯ.
17. ಮುಖ್ಯೋಪಾದ್ಯಾಯರು, ಶ್ರೀ ಆಂಜನೇಯ ವಸತಿಯುತ ಪ್ರೌಢ ಶಾಲೆ ಜರೀಕಟ್ಟೆ, ದಾವಣಗೆರೆ ದಕ್ಷಿಣ ವಲಯ.
18. ಮುಖ್ಯೋಪಾದ್ಯಾಯರು, ಸರ್ಕಾರಿ ಪ್ರೌಢಶಾಲೆ ಗುತ್ತೂರು ಹರಿಹರ ತಾಲ್ಲೂಕು.
19. ಮುಖ್ಯೋಪಾದ್ಯಾಯರು, ಸರ್ಕಾರಿ ಪ್ರೌಢ ಶಾಲೆ ಟಿ ಗೋಪಗೊಂಡನಹಳ್ಳಿ ಹೊನ್ನಾಳಿ ತಾಲ್ಲೂಕು
20. ಮುಖ್ಯೋಪಾದ್ಯಾಯರು, ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಲಕ್ಕಂಪುರ ಜಗಳೂರು ತಾಲ್ಲೂಕು.

ಸಭೆಯ ಆರಂಭದಲ್ಲಿ ಉಪಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ದಾವಣಗೆರೆ ಜಿಲ್ಲೆ ಇವರು ಸಭೆಯಲ್ಲಿ ಉಪಸ್ಥಿತರಿರುವ ಎಲ್ಲರಿಗೂ ಸ್ವಾಗತ ಕೋರಿದರು. ನಂತರದಲ್ಲಿ ಜಿಲ್ಲಾ ನೋಡಲ್ ಅಧಿಕಾರಿಗಳು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಇವರು ಸದರಿ ಕಾರ್ಯಕ್ರಮದ ವಿವರ, ಶಾಲೆಗಳಿಗೆ ಅನುದಾನದ ಹಂಚಿಕೆ, ಅನುದಾನ ಬಳಕೆಯ ಮಾರ್ಗಸೂಚಿ, ದಾಖಲೀಕರಣ ಕುರಿತಂತೆ ಹಾಗೂ ಜಿಲ್ಲೆಯಲ್ಲಿ 300 ಇಕೋ ಕ್ಲಬ್ ಶಾಲೆಗಳಿವೆ ಹಾಗೂ ಸಮಿತಿಯಲ್ಲಿನ ಆಯ್ದ 5 ಶಾಲೆಯ ಮುಖ್ಯ ಶಿಕ್ಷಕರು ಹಾಜರಿದ್ದಾರೆ ಎಂದು ಇಕೋ–ಕ್ಲಬ್ ಜಿಲ್ಲಾ ಸಮಿತಿಗೆ ವಿವರಿಸಿದರು.



ಇಕೋ–ಕ್ಲಬ್ ಜಿಲ್ಲಾ ಅನುಷ್ಟಾನ ಸಮಿತಿಯವರು ಶಾಲೆಯ ಮುಖ್ಯ ಶಿಕ್ಷಕರಿಗೆ ತಮ್ಮ ಶಾಲೆಯಲ್ಲಿ ಇಕೋ–ಕ್ಲಬ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವ ಬಗ್ಗೆ ವಿವರಿಸಲು ಸೂಚಿಸಿದರು.

ಇಕೋ–ಕ್ಲಬ್ ನೋಡಲ್ ಅಧಿಕಾರಿಗಳು, ಮುಖ್ಯೋಪಾದ್ಯಾಯರು, ಗ್ರಾಮಾಂತರ ಪ್ರೌಢ ಶಾಲೆ ಕೆರೆಬಿಳಚಿ ಚನ್ನಗಿರಿ ತಾಲ್ಲೂಕು. ಇವರು ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ವಿವರಿಸಿದರು.

- ಮಕ್ಕಳಿಗೆ ಪರಿಸರದ ಕಾಳಜಿ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಮಾಡಿರುವ ಕುರಿತು ಮಾಹಿತಿ ನೀಡಿದರು.
- ಲ್ಯಾಬ್‌ಗಳಲ್ಲಿ ಮಾಡ್ಯುಲ್ ಮೂಲಕ ಮಕ್ಕಳಿಗೆ ಪಾಠ–ಬೋಧನೆಯನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಮಕ್ಕಳಿಗೆ ರಜಾ ಅವಧಿಯಲ್ಲಿ ಚಟುವಟಿಕೆ ರೂಪದಲ್ಲಿ ಒಂದು ಗಿಡವನ್ನು ಬೆಳೆಸಿಕೊಂಡು ಬರಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಇಕೋ-ಕ್ಲಬ್ ನೋಡಲ್ ಅಧಿಕಾರಿಗಳು, ಮುಖ್ಯೋಪಾದ್ಯಾಯರು, ಸರ್ಕಾರಿ ಪ್ರೌಢ ಶಾಲೆ ಮೆಳ್ಳೆಕಟ್ಟೆ ದಾವಣಗೆರೆ ಉತ್ತರ ವಲಯ. ಇವರು ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ವಿವರಿಸಿದರು.

- ಮಕ್ಕಳಿಗೆ ಗಿಡಗಳನ್ನು ದತ್ತು ನೀಡಿರುವ ಮೂಲಕ ಗಿಡಗಳ ಪೋಷಣೆಯ ಜವಬ್ದಾರಿಯನ್ನು ನೀಡಲಾಗಿದೆ.
- ಮಕ್ಕಳಿಗೆ ರಸಪ್ರಶ್ನೆ ಕಾರ್ಯಕ್ರಮ, ಪರಿಸರದ ಸಂರಕ್ಷಣೆ ಕುರಿತು ಜಾಗೃತಿ ಅಭಿಯಾನ ಏರ್ಪಡಿಸಿರುವ ಕುರಿತು ಮಾಹಿತಿ ನೀಡಿದರು.
- ಮಳೆನೀರು ಕೋಯ್ಲು ವ್ಯವಸ್ಥೆಯನ್ನು ಕಲ್ಪಿಸಿ ಗಿಡಗಳನ್ನು ಬೆಳೆಸಲಾಗಿದೆ.

ಇಕೋ-ಕ್ಲಬ್ ನೋಡಲ್ ಅಧಿಕಾರಿಗಳು, ಮುಖ್ಯೋಪಾದ್ಯಾಯರು, ಶ್ರೀ ಆಂಜನೇಯ ವಸತಿಯುತ ಪ್ರೌಢ ಶಾಲೆ ಜರೀಕಟ್ಟೆ, ದಾವಣಗೆರೆ ದಕ್ಷಿಣ ವಲಯ. ಇವರು ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ವಿವರಿಸಿದರು.

- ಶಾಲಾ ಆವರಣವು ಮರುಭೂಮಿಯಂತೆ ಇದ್ದ ಪ್ರದೇಶವನ್ನು ಹಸಿರುಮಯವಾಗಿ ಮಾಡಿದ್ದಾರೆ.
- ಪ್ರತಿವರ್ಷ 100 ರಿಂದ 200 ಗಿಡ ನೆಡುವ ಗುರಿಯನ್ನು ಹೊಂದಿರುತ್ತೇವೆ ಎಂದು ತಿಳಿಸಿದರು.
- 28 ವರ್ಷದಿಂದ ಸಸಿ ನೆಡುವ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ ಎಂದು ವ್ಯಕ್ತಪಡಿಸಿದರು.
- ಇಕೋ-ಕ್ಲಬ್ ಅಡಿ 160 ಸಸಿಗಳನ್ನು ನೆಟ್ಟಿದ್ದೇವೆ ಎಂದು ತಿಳಿಸಿದರು.
- ಇಕೋ-ಕ್ಲಬ್ ಚಟುವಟಿಕೆಗಳನ್ನು ಶಾಲೆಯಲ್ಲಿ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಇಕೋ-ಕ್ಲಬ್ ನೋಡಲ್ ಅಧಿಕಾರಿಗಳು, ಮುಖ್ಯೋಪಾದ್ಯಾಯರು, ಸರ್ಕಾರಿ ಪ್ರೌಢಶಾಲೆ ಗುತ್ತೂರು ಹರಿಹರ ತಾಲ್ಲೂಕು. ಇವರು ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ವಿವರಿಸಿದರು.

- ಪ್ಲಾಸ್ಟಿಕ್ ನಿರ್ಮೂಲನೆ ಕಾರ್ಯಕ್ರಮವನ್ನು ಆಯೋಜನೆ ಮಾಡಿ ಮಕ್ಕಳಿಗೆ ಅರಿವು ಮೂಡಿಸಲಾಗಿದೆ.
- ಜಾಗೃತಿ ಕಾರ್ಯಕ್ರಮದ ಪರಿಣಾಮವಾಗಿ ಗ್ರಾಮದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆಯಾಗಿದೆ ಎಂದು ತಿಳಿಸಿದರು.
- ಶಾಲೆಯಲ್ಲಿರುವ ಗಿಡ-ಮರಗಳಿಗೆ ಹಸಿ-ಕಸ, ಒಣ-ಕಸ, ಬೇರ್ಪಡಿಸಿ ಗೊಬ್ಬರ ಮಾಡಿ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಇಕೋ-ಕ್ಲಬ್ ನೋಡಲ್ ಅಧಿಕಾರಿಗಳು, ಮುಖ್ಯೋಪಾದ್ಯಾಯರು, ಸರ್ಕಾರಿ ಪ್ರೌಢ ಶಾಲೆ ಟಿ ಗೋಪಗೊಂಡನಹಳ್ಳಿ ಹೊನ್ನಾಳಿ ತಾಲ್ಲೂಕು ಇವರು ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ವಿವರಿಸಿದರು.

- ಔಷಧಿ ಸಸ್ಯಗಳ ಉದ್ಯಾನವನವನ್ನು ನಿರ್ಮಿಸಲಾಗಿರುತ್ತದೆ.
- ಶಾಲೆಯಲ್ಲಿ ಮಳೆ ನೀರು ಕೋಯ್ಲು ವ್ಯವಸ್ಥೆ ಇರುವುದರಿಂದ ಬೇಸಿಗೆಯಲ್ಲಿ ಗಿಡಗಳಿಗೆ ಪಕ್ಷಿಗಳಿಗೆ ನೀರು ಬಳಕೆ ಮಾಡುತ್ತಿದ್ದೇವೆ.
- ಪ್ರತಿ ವರ್ಷ ಪರಿಸರ ಜಾಗೃತಿ ಕುರಿತು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.

ಇಕೋ-ಕ್ಲಬ್ ನೋಡಲ್ ಅಧಿಕಾರಿಗಳು, ಮುಖ್ಯೋಪಾದ್ಯಾಯರು, ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಲಕ್ಕಂಪುರ ಜಗಳೂರು ತಾಲ್ಲೂಕು. ಇವರು ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ವಿವರಿಸಿದರು.

- ಬೀಜದ ಉಂಡೆಗಳನ್ನು ಮಾಡಿ ಮಕ್ಕಳಿಗೆ ವಿತರಿಸಿ ಮನೆಯ ಅಕ್ಕ-ಪಕ್ಕದಲ್ಲಿ ಗಿಡಗಳನ್ನು ಬೆಳೆಸಲು ಕ್ರಮವಹಿಸಲಾಗಿದೆ.
- ಪೂರಕ-ಪ್ರೇರಕ ಅಂಶಗಳ ಬಗ್ಗೆ ಮಕ್ಕಳಿಗೆ ತಿಳಿಸಿದ್ದಾರೆ.
- ಹಳೆಯ ವಸ್ತುಗಳ ಮೂಲಕ(ಹಳೇ ಚೀಲಗಳ) ಹಾರಗಳನ್ನು ಮಾಡಿಸಿದ್ದಾರೆ. ಮಕ್ಕಳಿಗೆ ಮರಗಳ ಬಳಕೆಯ ಬಗ್ಗೆ ಚರ್ಚೆ ನಡೆಸುವ ಮೂಲಕ ಜಾಗೃತಿ ಮೂಡಿಸಿದ್ದಾರೆ.

ಜಿಲ್ಲಾ ಮಾಲಿನ್ಯ ನಿಯಂತ್ರಣ ಅಧಿಕಾರಿ ದಾವಣಗೆರೆ ಇವರು ಇಲಾಖೆಯಲ್ಲಿ ಹಸಿರು, ಹಳದಿ ಶಾಲೆಗಳು ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಪಂಚಭೂತಗಳ ಬಗ್ಗೆ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ. ನೀರು ವ್ಯತ್ಯಯವಾಗದಂತೆ ಜಾಗೃತಿ ಮೂಡಿಸಿ ಪ್ಲಾಸ್ಟಿಕ್ ಬಳಕೆಯನ್ನು ನಿರ್ಮೂಲನೆ ಮಾಡಲು ಸಲಹೆ ನೀಡಿದರು.

ಜಿಲ್ಲಾ ಅರಣ್ಯಾಧಿಕಾರಿ, ದಾವಣಗೆರೆ, ಇವರು ಗಿಡಗಳ ಸ್ಕೂಲ್ ನರ್ಸರಿ ಇದೆ, ಬೀಜ ಮಣ್ಣಿನ ಸಂರಕ್ಷಣೆ ಬಗ್ಗೆ ಪರಿಚಯವನ್ನು ನೀಡಲಾಗುತ್ತಿದೆ. 10000 ಗಿಡ ನೆಡೆಸಿದರೆ ರೂ.25000/- ಅನುದಾನ ನೀಡಲಾಗುವುದು. ಕಾಂಪಾ ಯೋಜನೆಯಡಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದೆಂದು ತಿಳಿಸಿದರು. ಮನೆಗೊಂದು ಗಿಡ ಊರಿಗೊಂದು ವನ ಎಂಬ ಕಾರ್ಯಕ್ರಮದಡಿ ಸಸಿಗಳನ್ನು ಪಡೆದುಕೊಳ್ಳುವಂತೆ ಸೂಚಿಸಿದರು.

ಮಾನ್ಯ ಉಪನಿರ್ದೇಶಕರು(ಆಡಳಿತ) ಸಾ.ಶಿ.ಇ ದಾವಣಗೆರೆ ಇವರು 2020-21, 2021-22 ಸಾಲಿನಲ್ಲಿ ಜಿಲ್ಲೆಯಲ್ಲಿ ಅತ್ಯುತ್ತಮವಾಗಿ ಇಕೋ-ಕ್ಲಬ್ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿದ 12 ಶಾಲೆಗಳಿಗೆ ಮೊಮೆಂಟೊ ವಿತರಣೆ ಮೂಲಕ ಅಭಿನಂದಿಸಲಾಯಿತು.



ಸಭೆಯ ಅಂತಿಮ ಭಾಗದಲ್ಲಿ ಶ್ರೀ ಯೋಗೀಶ್ವರಯ್ಯ ಎಂ.ಆರ್. ಸಹಾಯಕ ಯೋಜನಾ ಸಮನ್ವಯಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ, ಶಿಕ್ಷಕರಿಗೆ ಹಾಗೂ ಸಿಬ್ಬಂದಿಯವರಿಗೆ ವಂದನೆಗಳನ್ನು ಸಲ್ಲಿಸುತ್ತಾ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳ ಸಲಹೆ ಮಾರ್ಗದರ್ಶನದಂತೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುವುದು ಎಂದು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸಮಗ್ರ ಶಿಕ್ಷಣ ಕರ್ನಾಟಕ, ಸಾ.ಶಿ.ಇಲಾಖೆ, ದಾವಣಗೆರೆ